ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct 2022, Pp. 40-49.
©IIMRD, Mysuru
IIMRD JOURNALS
www.iimrd.com

# ಸಕಲೇಶಪುರ ತಾಲೂಕಿನ ವಲಸೆ ಕೂಲಿ ಕಾರ್ಮಿಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಡಾ.ಸುರೇಶ.ಸಿ***
*ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು – ಸ್ವಾಯತ್ತ, ಹಾಸನ.

***ಸಾರಾಂಶ: (Abstract)***

*ಪ್ರತಿಯೊಂದು ಜೀವರಾಶಿಯಲ್ಲಿಯೂ ಒಂದಲ್ಲ ಒಂದು ಸ್ಥಳಕ್ಕೆ ಹಲವು ಕಾರಣಗಳಿಂದ ಹೋಗಿ ದುಡಿಯುವುದು, ನೆಲೆಸುವುದು ಇದ್ದೆ ಇದೆ. ಇದು ಮನುಷ್ಯ ಪ್ರಾಣಿಯಲ್ಲಿಯೂ ಸಹಜವಾಗಿದೆ. ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ, ಸಂಪಾದನೆಗಾಗಿ, ಆರೋಗ್ಯಕ್ಕಾಗಿ, ನೆಮ್ಮದಿಗಾಗಿ ಹೀಗೆ ಹಲವು ಕಾರಣಗಳಿಂದ ಮನುಷ್ಯ ಒಂದಲ್ಲ ಒಂದು ಕಾರಣದಿಂದ ಹುಟ್ಟಿ ಬೆಳೆದ ಸ್ಥಳವನ್ನು ಬಿಟ್ಟು ಬೆರೊಂದು ಸ್ಥಳದಲ್ಲಿ ನೆಲೆಸುವುದು ಸಹಜ ಗುಣವಾಗಿದೆ. ಜಗತ್ತಿನ ಬೇರಾವ ದೇಶಕ್ಕಿಂತಲೂ ಭಾರತದಲ್ಲಿ ಅತೀ ಹೆಚ್ಚು ಜನಸಂಖ್ಯೆಯ ಜನರು ವಲಸೆ ಹೋಗುತ್ತಿದ್ದಾರೆ ಎಂಬುದು ತಿಳಿದುಬಂದಿದೆ. ಇಷ್ಟೇ ಅಲ್ಲದೇ ಪ್ರತಿವರ್ಷವೂ ಕನಿಷ್ಠ 20,000 ಮಂದಿ ತರಬೇತಿ ಹೊಂದಿದ ಭಾರತೀಯರು ಶಾಶ್ವತ ನೆಲೆಯಲ್ಲಿ ಭಾರತವನ್ನು ತೊರೆದು ವಿದೇಶಗಳಿಗೆ ವಲಸೆ ಹೋಗಿ ನೆಲೆಸುತ್ತಿದ್ದಾರೆ. ಕೇವಲ ಕೂಲಿ ಕಾರ್ಮಿಕರು ವಲಸೆ ಹೋಗುವುದಲ್ಲದೇ, ಉನ್ನತ ವ್ಯಾಸಂಗಕ್ಕಾಗಿ ವಿದೇಶಗಳಿಗೆ ಹೋಗಿ ಕೊನೆಗೆ ಅಲ್ಲಿಯೇ ನೆಲೆಸುವವರ ಸಂಖ್ಯೆಯೂ ಹೆಚ್ಚುತ್ತಿದೆ. ಅನೇಕ ಪ್ರತಿಭಾವಂತರು ಮೂಲ ಸ್ಥಳಗಳಾಚೆ ತಮ್ಮ ಜೀವನ್ನು ಕಟ್ಟಿಕೊಳ್ಳುತ್ತಿರುವುದನ್ನು ಕಾಣಬಹುದು. ಭಾರತವನ್ನು ತ್ಯಜಿಸಿದ ಪ್ರತಿಭಾವಂತ ವಲಸಿಗರನ್ನು "ಮರಳಿ ಮನೆಗೆ" ತರುವ ಯೋಜನೆಗಳನ್ನು ಕೂಡ ಮಾಡಿವೆ. ಭಾರತವನ್ನು ಒಳಗೊಂಡಂತೆ ಬಹುತೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕಂಡು ಬರುತ್ತಿರುವ ಒಂದು ಪ್ರಮುಖ ಸಾಮಾಜಿಕ ಸಮಸ್ಯೆಯಾಗಿದೆ.*

***ಮುಖ್ಯಪದಗಳು (Keywords):*** *ವೃತ್ತಿ, ವಲಸೆ, ಕೂಲಿ ಕಾರ್ಮಿಕರು, ಸಮಾಜಶಾಸ್ತ್ರ.*

## ಪೀಠಿಕೆ

ವಲಸೆಯು ಐಚ್ಚಿಕವಾದುದ್ದು, ವ್ಯಕ್ತಿ, ಪ್ರಾಣಿ ಇಲ್ಲವೇ ಪಕ್ಷಿಯ ಇಚ್ಛೆಯನ್ನು ಆಧರಿಸಿ ಸಂಭವಿಸುವುದು. ಭಾರತವು ಗ್ರಾಮಗಳಿಂದ ಕೂಡಿದ ರಾಷ್ಟ, ಪ್ರತಿವರ್ಷ ಗಣನೀಯ ಸಂಖ್ಯೆಯಲ್ಲಿ ಗ್ರಾಮದಿಂದ ಗ್ರಾಮಕ್ಕೆ, ಗ್ರಾಮದಿಂದ ನಗರಕ್ಕೆ ವಲಸೆ ಹೋಗುವರು. ಮಹಿಳೆಯರಿಗೆ ಹೋಲಿಸಿದರೆ ಪುರುಷರು ಗ್ರಾಮದಿಂದ ಗ್ರಾಮಕ್ಕೆ ವಲಸೆ ಕಡಿಮೆ ಪ್ರಮಾಣದಲ್ಲಿರುವುದು, ಗ್ರಾಮದಿಂದ ನಗರಕ್ಕೆ ಅಧಿಕವಾಗಿದೆ. ರೈತರು ಇತ್ತೀಚಿನ

***Please cite this article as:*** ಡಾ. ಸುರೇಶ. ಸಿ. (2022). ಸಕಲೇಶಪುರ ತಾಲೂಕಿನ ವಲಸೆ ಕೂಲಿ ಕಾರ್ಮಿಕರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ.* 40–49.

ದಿನಗಳಲ್ಲಿ ನಗರಕ್ಕೆ ಅಥವಾ ಪಟ್ಟಣಕ್ಕೆ ವಲಸೆ ಹೋಗುವುದು ಸಾಮಾನ್ಯವಾಗಿದೆ. ವಲಸಿಗರು ಬಹಳ ನೆಮ್ಮದಿಯಿಂದ ಬದುಕುತ್ತಿದ್ದಾರೆ ಎಂದು ಹೇಳುವುದು ಸಾಧ್ಯ ಇಲ್ಲ. ವಲಸೆಕೋರರ ಮನಸ್ಸು ಇರುವುದೇ ಹಾಗೆ, ಹುಟ್ಟೂರಿನ ಬೇರು ಕಳಚಿಕೊಂಡು ಬೇರೆ ಊರುಗಳಲ್ಲಿ ನೆಲೆ ಕಂಡುಕೊಂಡಿರುವ ಈ ಜನ ಸದಾ ಅಸುರಕ್ಷತೆಯಿಂದ ಬಳಲುತ್ತಾ ಇರುತ್ತಾರೆ. ಉದ್ಯೋಗಾವಕಾಶಕ್ಕಾಗಿ ಅಂತರರಾಜ್ಯ ವಲಸೆ ಕೂಡ ಹೆಚ್ಚುತ್ತಿದೆ. ವಲಸೆ ಪ್ರವೃತ್ತಿ ನಮ್ಮ ಪೂರ್ವಜರ ಕಾಲದಿಂದಲೂ ನೋಡಬಹುದಾದರೂ ಇತ್ತೀಚಿನ ದಿನಗಳಲ್ಲಿ ಯಥೇಚ್ಚವಾಗಿ ಬೆಳೆಯತೊಡಗಿದೆ.

**ಕಾರ್ಮಿಕರ ಪರಿಕಲ್ಪನೆ**

ಕೂಲಿಗಾಗಿ ಕೆಲಸ ನಿರ್ವಹಿಸುವ ಕಾರ್ಮಿಕರನ್ನು ಕೂಲಿಕಾರ್ಮಿಕರು ಎಂದು ಕರೆಯಬಹುದಾಗಿದೆ. ಇವರಲ್ಲಿ ಪ್ರಮುಖವಾಗಿ ಕೃಷಿಕೂಲಿ ಕಾರ್ಮಿಕರು, ಕೈಗಾರಿಕೆಯಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು, ಕಟ್ಟಡ ಕಾರ್ಮಿಕರು ಹಾಗೂ ಇತರರು. ವಿವಿಧ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ಕಾರ್ಮಿಕರು ವಿವಿಧ ರೀತಿಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಕಾರ್ಮಿಕರಲ್ಲಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರನ್ನು ಕಾಣಬಹುದಾಗಿದ್ದು, ಎರಡೂ ವರ್ಗದ ಕಾರ್ಮಿಕರಲ್ಲಿಯೂ ಕೂಡ ವಿಭಿನ್ನ ಸಮಸ್ಯೆಗಳನ್ನು ಕಾಣಬಹುದಾಗಿದೆ.

**ವಲಸೆ ಕಾರ್ಮಿಕರು**

ತಮ್ಮ ಮೂಲಸ್ಥಳದಿಂದ ಬೇರೊಂದು ಪ್ರದೇಶಕ್ಕೆ ಉದ್ಯೋಗವನ್ನರಸಿಕೊಂಡು ಹೋಗುವವರನ್ನು ವಲಸೆ ಕಾರ್ಮಿಕರು ಎನ್ನುವರು. ಸಂಭಾವನೆಯ ಚಟುವಟಿಕೆಯಲ್ಲಿ ತೊಡಗಿರುವುದಕ್ಕಾಗಿ ಒಂದು ರಾಜ್ಯ, ದೇಶ, ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಿ ಮಾಡುವ ಕೆಲಸಗಾರರನ್ನ ವಲಸೆ ಕಾರ್ಮಿಕರು ಎನ್ನುವರು. ಅನಕ್ಷರತೆ ಅನೈಕ್ಯತೆ ಶಿಸ್ತಿನ ಕೊರತೆ ವಲಸೆ ಪ್ರವೃತ್ತಿ ಸಂಘಟನೆಯ ಅಭಾವ ಕಡಿಮೆ ದಕ್ಷತೆ ಬಡತನ ಕಾನೂನಿನ ಬಗ್ಗೆ ಅಜ್ಞಾನ ದುರಾಭ್ಯಾಸಗಳು ನಿರ್ದಿಷ್ಟ ಸ್ಥಳ ಹೊಂದಿಲ್ಲದಿರುವುದು ಮೌಢ್ಯತೆ ಹಾಗೂ ಅಲೆಮಾರಿ ಮನೋಭಾವ ಹೊಂದಿದವರಾಗಿದ್ದಾರೆ.

**ಅಧ್ಯಯನದ ಉದ್ದೇಶಗಳು**

ಪ್ರಸ್ತುತ ಅಧ್ಯಯನದಲ್ಲಿ ಕಾಫಿ ತೋಟದಲ್ಲಿ ದುಡಿಯುತ್ತಿರುವ ವಲಸೆ ಕಾರ್ಮಿಕರ ಕುರಿತು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲಾಗಿದೆ. ಈ ಹಿನ್ನಲೆಯಲ್ಲಿ ಕೆಳಕಂಡ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

- ವಲಸೆ ಕೂಲಿ ಕಾರ್ಮಿಕರ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು.
- ವಲಸೆಗೆ ಕಾರಣ ಮತ್ತು ವಲಸೆ ಕೂಲಿ ಕಾರ್ಮಿಕರ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.

**ಅಧ್ಯಯನದ ಮಾದರಿ**

ವಲಸೆ ಕೂಲಿ ಕಾರ್ಮಿಕರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ 50 ವಲಸೆ ಕಾರ್ಮಿಕರನ್ನು ಆಯ್ಕೆ ಮಾಡಿಕೊಂಡು ವೈಯಕ್ತಿಕವಾಗಿ ಅವರನ್ನು ಸಂದರ್ಶಿಸಿ ಮತ್ತು ಅವಲೋಕಿಸಿ ಮಾಹಿತಿ ಸಂಗ್ರಹಿಸಲಾಗಿದೆ.

**ಅಧ್ಯಯನ ಕಾರ್ಯಕ್ಷೇತ್ರದ ವ್ಯಾಪ್ತಿ**

ಪ್ರಸ್ತುತ ಅಧ್ಯಯನವು ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿಗೆ ಸೀಮಿತವಾಗಿದೆ. ಸಕಲೇಶಪುರವು ಮಲೆನಾಡು ಪ್ರದೇಶವಾಗಿದೆ. ಇಲ್ಲಿನ ಹಸಿರು ಬೆಟ್ಟಗಳ ನಡುವೆ ಕಾಫಿ, ಏಲಕ್ಕಿ, ಮೆಣಸು, ಅಡಕೆ, ತೆಂಗು, ಬಾಳೆಯ ತೋಟಗಳಿಂದ ಆವೃತವಾಗಿದ್ದು ಸಮಶೀತೋಷ್ಣ ಹವಾಮಾನವನ್ನು ಹೊಂದಿದೆ. ಮುಂಜ್ರಾಬಾದ್ ಕೋಟೆ, ಕಾಡುಮನೆ ಎಸ್ಟೇಟ್, ಬಿಸಲೆ ಮತ್ತು ಹಲವು ನೈಸರ್ಗಿಕ ತಾಣಗಳಿವೆ. ಈ ದಕ್ಷಿಣ ಶ್ರೇಣಿಯನ್ನು ಸಸ್ಯ ಮತ್ತು ಪ್ರಾಣಿ ವೈವಿಧ್ಯತೆಯ ವಿಷಯದಲ್ಲಿ ವಿಶ್ವದ 18 ಅತ್ಯಂತ ವೈವಿಧ್ಯಮಯ ತಾಣಗಳಲ್ಲಿ ಒಂದೆಂದು ಪಟ್ಟಿಮಾಡಲಾಗಿದೆ. ಸದಾ ತೇವಾಂಶವಿರುವ ಉಪ ಉಷ್ಣವಲಯದ ಈ ಪ್ರದೇಶದಲ್ಲಿ ಬೀಳುವ ಉತ್ತಮ ಮಳೆಯು ಜೀವ ವೈವಿಧ್ಯತೆಯ ಏಳಿಗೆಗೆ ಸಹಾಯಕವಾಗಿದೆ. ಸಕಲೇಶಪುರದಲ್ಲಿ ಕಾಫಿ, ಮೆಣಸು, ಏಲಕ್ಕಿ ತೋಟಗಳು ಅಧಿಕವಾಗಿ ಇರುವುದರಿಂದ ಇಲ್ಲಿ ವರ್ಷವಿಡಿ ಕೆಲಸವಿರುತ್ತದೆ. ಈ ಕಾರಣಕ್ಕಾಗಿ ರಾಜ್ಯ ಮತ್ತು ಅಂತರರಾಜ್ಯ ವಲಸೆ ಕಾರ್ಮಿಕರು ಬಂದು ಕಾಫಿ ತೋಟಗಳಲ್ಲಿ ದುಡಿಯುತ್ತಿದ್ದಾರೆ.

**ವಲಸೆ ಕೂಲಿ ಕಾರ್ಮಿಕರ ಮಾಹಿತಿ ವಿಶ್ಲೇಷಣೆ**

**ವಲಸೆ ಕಾರ್ಮಿಕರ ಮೂಲ ಸ್ಥಳ**

ವಲಸೆ ಕಾರ್ಮಿಕರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೊಟ್ಟೆ ಪಾಡಿಗಾಗಿ ದುಡಿದು ತಮ್ಮ ಜೀವನವನ್ನು ಸಾಗಿಸುವವರಾಗಿದ್ದಾರೆ. ಇವರಿಗೆ ಮೂಲ ಸ್ಥಳದಲ್ಲಿ ದುಡಿಮೆಗೆ ಸೂಕ್ತವಾದ ನೆಲೆ ಇಲ್ಲದಿರುವುದರಿಂದ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಮೂಲ ಸ್ಥಳವನ್ನು ಬಿಟ್ಟು ಬೆರೊಂದು ಸ್ಥಳಕ್ಕೆ ಹೋಗಿ ದುಡಿದು ಕುಟುಂಬ ನಿರ್ವಹಣೆಯನ್ನು ಮಾಡುತ್ತಿದ್ದಾರೆ.

**ಕೋಷ್ಟಕ 01: ವಲಸೆ ಕಾರ್ಮಿಕರ ಮೂಲ ಸ್ಥಳದ ವಿವರ**

| **ಕ್ರ.ಸಂ.** | **ಮೂಲಸ್ಥಳ** | **ಆವೃತ್ತಿ** | **ಶೇಕಡವಾರು** |
|---|---|---|---|
| 1 | ಬಳ್ಳಾರಿ | 37 | 74 |
| 2 | ದಾವಣಗೆರೆ | 03 | 06 |
| 3 | ಬಿಜಾಪುರ | 08 | 16 |
| 4 | ತಮಿಳುನಾಡು | 02 | 04 |
| | **ಒಟ್ಟು** | **50** | **100** |

ಕೋಷ್ಟಕ 1ನ್ನು ಅವಲೋಕಿಸಿದಾಗ ಶೇ. (3)74% ರಷ್ಟು ಜನ ಬಳ್ಳಾರಿಯಿಂದ, ಶೇ.6ರಷ್ಟು ಜನರು ದಾವಣಗೆರೆಯಿಂದ, ಶೇ.16 ರಷ್ಟು ಜನ ಬಿಜಾಪುರ ಹಾಗೂ ಶೇ.4ರಷ್ಟು ಜನ ತಮಿಳುನಾಡಿನಿಂದ ವಲಸೆ ಬಂದವರಾಗಿದ್ದಾರೆ. ವಲಸೆ ಕಾರ್ಮಿಕರು ವಲಸೆ ಬಂದಿರುವ ಮೂಲ ಸ್ಥಳಗಳನ್ನು ನೋಡುವುದಾದರೆ ಹೆಚ್ಚಾಗಿ ಬಳ್ಳಾರಿ ಮತ್ತು ಬಿಜಾಪುರದಿಂದ ವಲಸೆ ಬಂದಿದ್ದಾರೆ ಎನ್ನುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಾಣಬಹುದು.

**ವಲಸೆ ಕಾರ್ಮಿಕರ ಜಾತಿ**

ಜಾತಿವ್ಯವಸ್ಥೆಯು ಭಾರತ ಸಮಾಜದ ಅವಿಭಾಜ್ಯ ಅಂಗವಾಗಿದೆ. ಜಾತಿಯು ಭಾರತದ ಜೀವನ ದರ್ಶನ, ರೂಢಿ ಸಂಪ್ರದಾಯ, ವಿವಾಹ, ಕುಟುಂಬ, ಆಚಾರ ವಿಚಾರ, ವ್ಯವಹಾರ ಮೊದಲಾದವುಗಳೊಂದಿಗೆ ಹಾಸುಹೊಕ್ಕಾಗಿ ಸೇರಿಹೋಗಿವೆ.

**ಕೋಷ್ಟಕ 02: ವಲಸೆ ಕಾರ್ಮಿಕರ ಜಾತಿಯ ವಿವರ**

| ಕ್ರ.ಸಂ. | ಜಾತಿ | ಆವೃತ್ತಿ | ಶೇಕಡವಾರು |
|---|---|---|---|
| 1 | ಬೋವಿ | 15 | 30 |
| 2 | ಮಾದಿಗ | 18 | 36 |
| 3 | ಕುರುಬರು | 09 | 18 |
| 4 | ಲಂಬಾಣಿ | 08 | 16 |
| | **ಒಟ್ಟು** | **50** | **100** |

ಕೋಷ್ಟಕ 2ರಲ್ಲಿ ಕಂಡುಬರುವುದೆನೆಂದರೆ ಬೋವಿ ಜನಾಂಗದವರು ಶೇ.30ರಷ್ಟು, ಮಾದಿಗ ಶೇ.36ರಷ್ಟು, ಕುರುಬರು ಶೇ.18ರಷ್ಟು ಹಾಗೂ ಲಂಬಾಣಿ ಜನಾಂಗದವರು ಶೇ.16ರಷ್ಟು ಇದ್ದಾರೆ. ಪ್ರಸ್ತುತ ಅಧ್ಯಯನವನ್ನು ನೋಡಿದಾಗ ತಳಸಮುದಾಯದವರಲ್ಲಿ ವಲಸೆ ಪ್ರವೃತ್ತಿ ಹೆಚ್ಚಿರುವುದನ್ನು ಕಾಣಬಹುದಾಗಿದೆ.

**ವಲಸೆ ಕಾರ್ಮಿಕರ ವೈವಾಹಿಕ ಸ್ಥಾನ**

ವಿವಾಹ ಎಂದರೆ ಸಮಾಜ ಒಪ್ಪಿದ ಸ್ತ್ರೀ ಪುರುಷರ ನಡುವಿನ ಸಾಂಗತ್ಯ. ವಿವಾಹವೆಂಬುದು ಪ್ರತಿಯೊಬ್ಬರ ಜೀವನದಲ್ಲಿ ಒಂದು ಪ್ರಮುಖ ಘಟ್ಟವಾಗಿದೆ. ನಮ್ಮ ಭಾರತೀಯ ಸಮಾಜದಲ್ಲಿ ವಿವಾಹ ಎಂಬುದು ಕೊಂಡಿಯಾಗಿದೆ ಮತ್ತು ಬಾಂದವ್ಯವಾಗಿದೆ. ಇದು ಸಮಾಜ ಒಪ್ಪಿತವಾದ ಸಂಸ್ಥೆಯಾಗಿದೆ.

**ಕೋಷ್ಟಕ 03:ವಲಸೆ ಕಾರ್ಮಿಕರ ವೈವಾಹಿಕ ಸ್ಥಾನದ ವಿವರ**

| ಕ್ರ.ಸಂ. | ವೈವಾಹಿಕ | ಆವೃತ್ತಿ | ಶೇಕಡವಾರು |
|---|---|---|---|
| 1 | ವಿವಾಹಿತರು | 32 | 64 |
| 2 | ಅವಿವಾಹಿತರು | 18 | 36 |
| | **ಒಟ್ಟು** | **50** | **100** |

ಕೋಷ್ಟಕ 3ರಲ್ಲಿ ಕಂಡುಬರುವುದೆನೆಂದರೆ ವಿವಾಹಿತರು ಶೇ.64ರಷ್ಟಿದ್ದು, ವಿವಾಹಿತರು ಶೇ.36ರಷ್ಟಿದ್ದಾರೆ. ಈ ಕೋಷ್ಟಕದಲ್ಲಿ ಕಂಡುಬಂದಂತೆ ವಿವಾಹಿತರೇ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದಿರುವುದನ್ನು ನೋಡಿದಾಗ ಜೀವನ ನಿರ್ವಹಣೆಗೊಸ್ಕರ ತಮ್ಮ ಊರುಗಳನ್ನು ಬಿಟ್ಟು ಬೇರೊಂದು ಕಡೆ ಬಂದು ದುಡಿದುಕೊಂಡು ಪುನಃ ವಾಪಾಸ್ ತಮ್ಮ ತಮ್ಮ ಸ್ಥಳಗಳಿಗೆ ತೆರಳುತ್ತಿದ್ದಾರೆ.

**ವಲಸೆ ಕಾರ್ಮಿಕರ ಶೈಕ್ಷಣಿಕ ಮಟ್ಟ**

ಶಿಕ್ಷಣವು ವ್ಯಕ್ತಿತ್ವದ ವಿಕಸನಕ್ಕೆ ಮತ್ತು ಮಾನವನ ಸರ್ವತೋಮುಖ ಪ್ರಗತಿಗೆ ಅತ್ಯಾವಶ್ಯಕವಾದುದು. ಶಿಕ್ಷಣವು ವಿವೇಕ, ವಿನಯ, ಶಿಸ್ತು, ಕರ್ತವ್ಯ ಪಾಲನೆ, ದೂರದೃಷ್ಠಿ, ವಿಶಾಲ ಮನೋಭಾವನೆ ಮುಂತಾದ ಸದ್ಗುಣಗಳನ್ನು ಬೆಳೆಸಿ ಜೀವನವನ್ನು ವಿಕಾಸಗೊಳಿಸುತ್ತದೆ. ಪುರಾತನ ಕಾಲದಿಂದಲೂ ವಿದ್ಯೆಯನ್ನು ಕೆಲವರ ಸ್ವತ್ತಾಗಿಸಿಕೊಂಡಿದ್ದರು ಸ್ವಾತಂತ್ರ್ಯ ನಂತರದಲ್ಲಿ ಶ್ರೀಸಾಮಾನ್ಯನಿಗೂ ಲಭ್ಯವಾಗುತ್ತಿದೆ.

**ಕೋಷ್ಟಕ 04:ವಲಸೆ ಕಾರ್ಮಿಕರ ಶೈಕ್ಷಣಿಕ ಮಟ್ಟದ ವಿವರ**

| ಕ್ರ.ಸಂ. | ಶೈಕ್ಷಣಿಕ ಮಟ್ಟ | ಆವೃತ್ತಿ | ಶೇಕಡವಾರು |
|---|---|---|---|
| 1 | ಅನಕ್ಷರಸ್ಥರು | 47 | 94 |
| 2 | ಪ್ರಾಥಮಿಕ ಶಿಕ್ಷಣ | 02 | 04 |
| 3 | ಮಾಧ್ಯಮಿಕ ಶಿಕ್ಷಣ | 00 | 00 |
| 4 | ಪ್ರೌಡ ಶಿಕ್ಷಣ | 01 | 02 |
| 5 | ಪದವಿ ಶಿಕ್ಷಣ | 00 | 00 |
| 6 | ಪದವಿ | 00 | 00 |
| | **ಒಟ್ಟು** | **50** | **100** |

ಕೋಷ್ಟಕದಲ್ಲಿ ಕಂಡುಬರುವುದೆನೆಂದರೆ ಅನಕ್ಷರಸ್ಥರು ಶೇ.94ರಷ್ಟು ಕಂಡು ಬಂದಿದ್ದು, ಪ್ರಾಥಮಿಕ ಶಿಕ್ಷಣವನ್ನು ಪಡೆದವರು ಶೇ.04ರಷ್ಟು ಜನರು, ಮಾಧ್ಯಮಿಕ ಶಿಕ್ಷಣ ಪಡೆದವರು ಶೂನ್ಯವಾಗಿದ್ದು, ಪ್ರೌಡಶಿಕ್ಷಣ ಪಡೆದವರು ಶೇ.02 ರಷ್ಟು ಮಾತ್ರ, ಪದವಿ ಪೂರ್ವ ಮತ್ತು ಪದವಿ ಪಡೆದವರು ಯಾರು ಕಂಡುಬಂದಿಲ್ಲ.

**ವಿದ್ಯಾಭ್ಯಾಸವನ್ನು ಮಾಡದಿರುವುದಕ್ಕೆ ಕಾರಣ**

ವಿದ್ಯಾಭ್ಯಾಸ ಮಾಡದಿರುವುದು ತಳಹಂತದ ಸಮುದಾಯಗಳಲ್ಲಿ ಮೊದಲಿನಿಂದಲೂ ಸಾಮಾನ್ಯವಾಗಿದೆ ಆದರೂ ಇತ್ತೀಚಿನ ದಿನದಲ್ಲಿ ಸರ್ವಶಿಕ್ಷಣ ಅಭಿಯಾನದಡಿ ಎಲ್ಲರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರೆಯುತ್ತಿದೆ. ಇದರಿಂದ ಎಲ್ಲ ವರ್ಗದ ಜನತೆಯ ಮಕ್ಕಳಿಗೂ ಶಿಕ್ಷಣ ಸಿಗುತ್ತಿದೆ.

**ಕೋಷ್ಟಕ 05:ವಿದ್ಯಾಭ್ಯಾಸವನ್ನು ಮಾಡದಿರುವುದಕ್ಕೆ ಕಾರಣದ ವಿವರ:**

| ಕ್ರ.ಸಂ | ವಿಧ್ಯಾಭ್ಯಾಸವನ್ನು ಮಾಡದಿರುವುದಕ್ಕೆ ಕಾರಣ | ಆವೃತ್ತಿ | ಶೇಕಡವಾರು |
|---|---|---|---|
| 1 | ಬಡತನ | 33 | 66 |
| 2 | ನಿರಾಸಕ್ತಿ | 09 | 18 |
| 3 | ಹದಗೆಟ್ಟ ಆರ್ಥಿಕ ಪರಿಸ್ಥಿತಿ | 08 | 16 |
| | **ಒಟ್ಟು** | **50** | **100** |

ಕೋಷ್ಟಕ 5ರಲ್ಲಿ ಕಂಡುಬರುವುದೆನೆಂದರೆ ವಿದ್ಯಾಭ್ಯಾಸವನ್ನು ಮಾಡದಿರುವುದಕ್ಕೆ ಕಾರಣ ಕೇಳಿದಾಗ ಬಡತನ ಎಂದು ಶೇ.66ರಷ್ಟು, ನಿರಾಸಕ್ತಿ ಎಂದು ಶೇ.18ರಷ್ಟು, ಹದಗೆಟ್ಟ ಆರ್ಥಿಕ ಪರಿಸ್ಥಿತಿ ಎಂದು ಶೇ.16ರಷ್ಟು ಇರುವುದು ಅಧ್ಯಯನದಿಂದ ಕಂಡುಬಂದಿದೆ. ವಿದ್ಯಾಭ್ಯಾಸ ತೊರೆಯಲು ಬಡತನ ಮತ್ತು ವಲಸೆ ಮೂಲ ಕಾರಣಗಳಾಗಬಹುದು. ಆದ್ದರಿಂದ ವಲಸೆ ಕಾರ್ಮಿಕರು ಮತ್ತು ಅವರ ಮಕ್ಕಳುಗಳು ವಿಧ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ.

**ವಲಸೆ ಕಾರ್ಮಿಕರ ಮಾತೃಭಾಷೆ**

ಯಾವುದೇ ನಿರ್ದಿಷ್ಟ ರಾಜ್ಯ ಅಥವಾ ನಿರ್ದಿಷ್ಟ ಪ್ರದೇಶ ಅಥವಾ ನಿರ್ದಿಷ್ಟ ಜನಾಂಗ ತನ್ನದೇ ಆದ ಒಂದು ಅಧಿಕೃತ ಮಾತೃ ಭಾಷೆಯನ್ನು ಹೊಂದಿರುತ್ತದೆ. ವಲಸೆ ಕಾರ್ಮಿಕರು ಸಹ ತಮ್ಮ ಕೌಟುಂಬಿಕ ಜೀವನದಲ್ಲಿ ಒಂದು ಭಾಷೆಯನ್ನು ಮಾತೃಭಾಷೆಯಾಗಿ ಬಳಸುತ್ತಾರೆ.

**ಕೋಷ್ಟಕ 06: ವಲಸೆ ಕಾರ್ಮಿಕರ ಮಾತೃಭಾಷೆಯ ವಿವರ**

| ಕ್ರ.ಸಂ | ಮಾತೃಭಾಷೆ | ಆವೃತ್ತಿ | ಶೇಕಡವಾರು |
|---|---|---|---|
| 1 | ಕನ್ನಡ | 40 | 80 |
| 2 | ತಮಿಳು | 02 | 04 |
| 3 | ಲಂಬಾಣಿ | 08 | 16 |
| | **ಒಟ್ಟು** | **50** | **100** |

ಕೋಷ್ಟಕ 6ರಲ್ಲಿ ಕಂಡುಬರುವುದೆನೆಂದರೆ ಶೇ.80ರಷ್ಟು ಜನರು ಕನ್ನಡ ಭಾಷೆ ಮಾತನಾಡುವವರಾಗಿದ್ದು, ಶೇ.04ರಷ್ಟು ಜನರು ತಮಿಳು ಭಾಷೆ ಮಾತನಾಡುವವರಾಗಿದ್ದಾರೆ, ಹಾಗೂ ಲಂಬಾಣಿ ಭಾಷೆ ಮಾತನಾಡುವವರು ಶೇ.14ರಷ್ಟು ಜನರು ಇರುವುದು ಕಂಡುಬಂದಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಸ್ಥಳೀಯ ವಲಸೆ ಕಾರ್ಮಿಕರೆ ಹೆಚ್ಚಾಗಿರುವುದು ಕಂಡುಬರುತ್ತದೆ.

**ವಲಸೆ ಕಾರ್ಮಿಕರ ಕೌಟುಂಬಿಕ ವ್ಯವಸ್ಥೆ**

ಕುಟುಂಬ ಎಂಬುದು ಮಾನವನ ಸಮೂಹ ಜೀವನದ ಅವಿಭಾಜ್ಯ ಅಂಗ.ಅದನ್ನು ಮಾನವ ತನ್ನ ಬದುಕಿನ ಒಂದು ಮುಖ್ಯ ಅಂಗವೆಂಬಂತೆ ಸಂರಕ್ಷಿಸಿಕೊಂಡು ಬಂದಿದ್ದಾರೆ. ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ವಿಭಕ್ತ ಕುಟುಂಬವು ಕಂಡು ಬರುತ್ತದೆ.

**ಕೋಷ್ಟಕ 07:ವಲಸೆ ಕಾರ್ಮಿಕರ ಕೌಟುಂಬಿಕ ವ್ಯವಸ್ಥೆಯ ವಿವರ**

| ಕ್ರ.ಸಂ | ಕುಟುಂಬದ ವಿಧ | ಆವೃತ್ತಿ | ಶೇಕಡವಾರು |
|---|---|---|---|
| 1 | ಅವಿಭಕ್ತ ಕುಟುಂಬ | 03 | 06 |
| 2 | ವಿಭಕ್ತ ಕುಟುಂಬ | 47 | 94 |
| | **ಒಟ್ಟು** | **50** | **100** |

ಕೋಷ್ಟಕ 7ರಲ್ಲಿ ಕಂಡುಬರುವುದೇನೆಂದರೆ ಅವಿಭಕ್ತ ಕುಟುಂಬದವರು ಶೇ.06ರಷ್ಟಿದ್ದು, ವಿಭಕ್ತ ಕುಟುಂಬದವರ ಸಂಖ್ಯೆ ಶೇ.94ರಷ್ಟಿದ್ದಾರೆ. ಅವಿಭಕ್ತ ಕುಟುಂಬ ವ್ಯವಸ್ಥೆ ಜೀವನ ನಿರ್ವಹಣೆಗಾಗಿ ವಲಸೆ ಹೋಗುವ ಮನೋಭಾವನೆಯನ್ನು ಹೆಚ್ಚಿಸುತ್ತದೆ. ದುಡಿಯಬೇಕು ತಿನ್ನಬೇಕು ಎನ್ನುವ ನಿಯಮವನ್ನು ಅಳವಡಿಸಿಕೊಂಡಿದೆ.

**ಸಮಾಜದಲ್ಲಿ ವಲಸೆ ಕಾರ್ಮಿಕರ ಅಂತಸ್ತು**

ಸಮಾಜದಲ್ಲಿ ಒಬ್ಬ ವ್ಯಕ್ತಿಯ ಅಂತಸ್ತು ಅವನ ಆರ್ಥಿಕ ಸ್ಥಿತಿಯಿಂದ ಉದ್ಯೋಗದಿಂದ ಆದಾಯದಿಂದ ಕೆಲವೊಮ್ಮೆ ನಿರ್ದರಿಸಲ್ಪಡುತ್ತದೆ. ಅದರಂತೆಯೇ ವಲಸೆ ಕಾರ್ಮಿಕರು ಸಮಾಜದಲ್ಲಿ ಯಾವ ಸಾಮಾಜಿಕ ಅಂತಸ್ತನ್ನು ಹೊಂದಿದ್ದಾರೆ ಎಂಬುದನ್ನು ತಿಳಿಯಬಹುದು.

**ಕೋಷ್ಟಕ 08: ಸಮಾಜದಲ್ಲಿ ವಲಸೆ ಕಾರ್ಮಿಕರ ಅಂತಸ್ಥಿನ ವಿವರ**

| ಕ್ರ.ಸಂ | ಅಂತಸ್ಥು | ಆವೃತ್ತಿ | ಶೇಕಡವಾರು |
|---|---|---|---|
| 1 | ಕೆಳಮಟ್ಟ | 17 | 34 |
| 2 | ಸಾಧಾರಣ | 28 | 56 |
| 3 | ಉತ್ತಮ | 05 | 10 |
| | **ಒಟ್ಟು** | **50** | **100** |

ಕೋಷ್ಟಕ 8ರಲ್ಲಿ ಕಂಡುಬರುವುದೇನೆಂದರೆ ಸಮಾಜದಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ ಹೊಂದಿರುವವರು ಎಂದು ಶೇ. 34ರಷ್ಟು, ಸಾಧಾರಣ ಅಂತಸ್ತನ್ನು ಹೊಂದಿರುವವರು ಎಂದು ಶೇ.56ರಷ್ಟು, ಉತ್ತಮ ಸ್ಥಾನವನ್ನು ಹೊಂದಿರುವವರು ಎಂದು ಶೇ.10ರಷ್ಟಿದ್ದಾರೆ ಎಂದು ತಿಳಿದುಬಂದಿದೆ. ವಲಸೆ ಕಾರ್ಮಿಕರ ಅಂತಸ್ತು ಸಾಧಾರಣವಾಗಿದೆ ಎನ್ನುವವರು ಹೆಚ್ಚಾಗಿರುವುದನ್ನು ನೋಡಿದರೆ ಸಮಾಜದಲ್ಲಿ ಆರ್ಥಿಕ ಸುಸ್ಥಿತಿ ಉತ್ತಮವಾಗಿ ಇಲ್ಲದಿರುವವರನ್ನು ಸಾಧಾರಣವಾಗಿ ನೋಡುತ್ತಾರೆ ಎನ್ನುವುದು ಅಧ್ಯಯನದಿಂದ ಕಂಡುಬರುತ್ತದೆ.

**ವಲಸೆ ಕಾರ್ಮಿಕರ ಕೂಲಿ ವರಮಾನ**

ವಲಸೆ ಕಾರ್ಮಿಕರೆಲ್ಲರು ದಿನದ ಲೆಕ್ಕದಲ್ಲಿ ವಾರಕ್ಕೆ ಒಂದು ಬಾರಿ ಕೂಲಿಯನ್ನು ಪಡೆಯುತ್ತಿರುವವರಾಗಿದ್ದಾರೆ. ಇವರಿಗೆ ಅವರ ದಿನದ ಖರ್ಚು, ಆಹಾರ, ಮತ್ತು ಇತರೆ ಖರ್ಚುಗಳನ್ನು ಕಳೆದುಕೊಂಡು 800 ರಿಂದ 1000 ರೂಪಾಯಿಗಳ ವರಗೆ ಉಳಿತಾಯ ಮಾಡುತ್ತಿರುವುದ ಅವರ ಕೂಲಿಯ ವರಮಾನವಾಗಿದೆ.

**ಕೋಷ್ಟಕ 09: ವಲಸೆ ಕಾರ್ಮಿಕರ ಕೂಲಿಯ ವಿವರ**

| ಕ್ರ.ಸಂ. | ಕೂಲಿ | ಆವೃತ್ತಿ | ಶೇಕಡವಾರು |
|---|---|---|---|
| 1 | 800–850 | 03 | 06 |
| 2 | 850–900 | 04 | 08 |
| 3 | 900–1000 | 43 | 86 |
| | **ಒಟ್ಟು** | **50** | **100** |

ಕೋಷ್ಟಕ 9ರಲ್ಲಿ ಕಂಡುಬರುವುದೇನೆಂದರೆ ವಲಸೆ ಕಾರ್ಮಿಕರ ಕೂಲಿಯ ವರಮಾನವನ್ನು ಗಮನಿಸಿದಾಗ 800–850 ರೂ. ದುಡಿಯುವವರು ಶೇ.6ರಷ್ಟು, 850–900 ರೂ.ದುಡಿಯುವವರು ಶೇ.8ರಷ್ಟು, 900–1000 ರೂ.ದುಡಿಯುತ್ತಿರುವವರು ಶೇ.86ರಷ್ಟು ಕಂಡು ಬಂದಿದ್ದಾರೆ. 900 ರಿಂದ 1000 ರೂಪಾಯಿಗಳನ್ನು ಪಡೆಯುತ್ತಿರುವವರು ಹೆಚ್ಚಾಗಿರುವುದು ಮತ್ತು ನಿಗದಿತ ವೇತನ ಇಲ್ಲದಿರುವುದು ಇವರು ಅಸಂಘಟಿತ ವಲಯಕ್ಕೆ ಸೇರಿರುವವರು ಎನ್ನುವುದನ್ನು ಕಾಣಬಹುದು.

**ವಲಸೆ ಬರಲು ಮುಖ್ಯ ಕಾರಣ**

ವಲಸೆ ಕಾರ್ಮಿಕರು ವಲಸೆ ಬರಲು ಮುಖ್ಯ ಕಾರಣ ಜೀವನ ನಿರ್ವಹಣೆ ಮಾಡುವುದಕ್ಕಾಗಿ. ತಮ್ಮ ಮೂಲ ಸ್ಥಳಗಳಲ್ಲಿ ಯಾವುದೇ ಉದ್ಯೋಗ ಸಿಗದಿದ್ದಾಗ ಅವರು ತಮ್ಮ ಸ್ವಂತ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಬಂದು ಜೀವನವನ್ನು ರೂಪಿಸಿಕೊಳ್ಳಲು ಸಂಪಾದನೆಯನ್ನು ಮಾಡುತ್ತಿರುವವರಾಗಿದ್ದಾರೆ.

**ಕೋಷ್ಟಕ 10: ವಲಸೆ ಬರಲು ಮುಖ್ಯ ಕಾರಣದ ವಿವರ**

| ಕ್ರ.ಸಂ | ವಲಸೆ ಬರಲು ಕಾರಣ | ಆವೃತ್ತಿ | ಶೇಕಡ |
|---|---|---|---|
| 1 | ಸಾಲ ತೀರಿಸುವುದಕ್ಕಾಗಿ | 43 | 86 |
| 2 | ಜೀವನ ನಿರ್ವಹಣೆಗಾಗಿ | 04 | 08 |
| 3 | ಸಂಪಾದನೆ ಮಾಡುವುದಕ್ಕಾಗಿ | 03 | 06 |
| | **ಒಟ್ಟು** | **50** | **100** |

ಕೋಷ್ಟಕ 10ರಲ್ಲಿ ಕಂಡುಬರುವುದೇನೆಂದರೆ ಶೇ.86ರಷ್ಟು ಜನರು ಸಾಲ ತೀರಿಸುವುದಕ್ಕಾಗಿ ಎಂದು, ಶೇ.8ರಷ್ಟು ಜನರು ಜೀವನ ನಿರ್ವಹಣೆಗಾಗಿ ಹಾಗೂ ಶೇ.6ರಷ್ಟು ಜನರು ಸಂಪಾದನೆ ಮಾಡುವುದಕ್ಕಾಗಿ ವಲಸೆ ಬಂದಿರುವುದು ಕಂಡುಬಂದಿದೆ. ಪ್ರಸ್ತುತ ಅಧ್ಯಯನದಲ್ಲಿ ಸಾಲ ತೀರಿಸುವುದಕ್ಕಾಗಿ ಎನ್ನುವವರು ಹೆಚ್ಚಾಗಿದ್ದಾರೆ.

**ವಲಸೆ ಕಾರ್ಮಿಕರ ಸಾಲ**

ವಲಸೆ ಕಾರ್ಮಿಕರು ಆರ್ಥಿಕವಾಗಿ ತೀರ ಹಿಂದುಳಿದಿರುವವರಾಗಿರುತ್ತಾರೆ. ಇವರು ಜೀವನ ನಿರ್ವಹಣೆ, ಹಬ್ಬ, ಮಕ್ಕಳ ಶಿಕ್ಷಣ, ವಿವಾಹ, ಆರೋಗ್ಯ, ಕುಟುಂಬ ನಿರ್ವಹಣೆ ಮುಂತಾದ ಕಾರ್ಯಗಳಿಗೆ ಸಾಲ ಪಡೆಯುವುದು ಅವರಿಗೆ ಅನಿವಾರ್ಯವಾಗಿದೆ.

**ಕೋಷ್ಟಕ 11: ವಲಸೆ ಕಾರ್ಮಿಕರ ಸಾಲದ ವಿವರ**

| ಕ್ರ.ಸಂ | ಸಾಲದ ವಿವರ | ಆವೃತ್ತಿ | ಶೇಕಡವಾರು |
|---|---|---|---|
| 1 | ವಿವಾಹಕ್ಕಾಗಿ | 17 | 34 |
| 2 | ಮನೆಯ ನಿರ್ವಹಣೆಗಾಗಿ | 23 | 46 |
| 3 | ಮಕ್ಕಳ ವಿದ್ಯಾಭ್ಯಾಸಕ್ಕಾಗಿ | 10 | 20 |
| | **ಒಟ್ಟು** | **50** | **100** |

ಕೋಷ್ಟಕ 11ರಲ್ಲಿ ಕಂಡುಬರುವುದೆನೆಂದರೆ ವಿವಾಹಕ್ಕಾಗಿ ಎಂದು ಶೇ.34ರಷ್ಟು, ಮನೆಯ ನಿರ್ವಹಣೆಗಾಗಿ ಶೇ.46ರಷ್ಟು ಜನರ ಹೆಚ್ಚಾಗಿ ಸಾಲ ಮಾಡಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೇ.20ರಷ್ಟು ಜನರು ಮಾಡಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಗಮನಿಸಬಹುದಾಗಿದೆ.

**ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಕಂಡು ಬಂದ ಅಂಶಗಳು**

ವಲಸೆ ಕಾರ್ಮಿಕರ ಕುರಿತಂತೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಬಗೆಗಿನ ಅಧ್ಯಯನವನ್ನು ನಡೆಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ಸಂದರ್ಶಿತರ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಬಗ್ಗೆ ಸೂಚನದಾರರನ್ನು ಸಂದರ್ಶಿಸಿ ಅವಲೋಕಿಸಿದಾಗ ಕಂಡು ಬಂದ ಸತ್ಯಾಸತ್ಯತೆಗಳನ್ನು ಈ ಮುಂದಿನಂತೆ ವಿವರಿಸುವ ಪ್ರಯತ್ನ ಮಾಡಲಾಗಿದೆ. ವಲಸೆ ಕಾರ್ಮಿಕರು ಹೆಚ್ಚಾಗಿ ಅನಕ್ಷರಸ್ಥರಾಗಿದ್ದಾರೆ. ಬೇರೆ–ಬೇರೆ ಜಿಲ್ಲೆ ಮತ್ತು ರಾಜ್ಯಗಳಿಂದ ವಲಸೆ ಬಂದಿದ್ದಾರೆ. ವಲಸೆ ಕಾರ್ಮಿಕರು ಹೆಚ್ಚಾಗಿ ಕೂಲಿ ಕೆಲಸ ಮಾಡುವವರಾಗಿದ್ದಾರೆ. ಸಾಲ ತೀರಿಸುವುದಕ್ಕಾಗಿಯೇ ಹೆಚ್ಚು ವಲಸೆ ಬಂದಿರುವುದು ಕಂಡು ಬಂದಿದೆ. ವಲಸೆ ಕಾರ್ಮಿಕರು ಕಾಫಿ ಹಣ್ಣನ್ನು ಕುಯ್ಯುವ ತಿಂಗಳಿನಲ್ಲಿ ಎಸ್ಟೇಟ್‌ಗಳಿಗೆ ಹೆಚ್ಚು ವಲಸೆ ಬರುತ್ತಿದ್ದಾರೆ. ಮಾಲೀಕರು ಕಾರ್ಮಿಕರನ್ನು ಉತ್ತಮ ಗೌರವಗಳನ್ನು ಕೊಡದೇ ಇರುವುದು ಕೂಡ ಕಂಡು ಬಂದ ಅಂಶವಾಗಿದೆ.

**ಸಲಹೆಗಳು**

ವಲಸೆ ಬರುವುದನ್ನು ನಿಲ್ಲಿಸಬೇಕು. ಏಕೆಂದರೆ ಆರ್ಥಿಕ ನಷ್ಟ ಉಂಟಾಗುವುದಲ್ಲದೇ ಬೇರೆ–ಬೇರೆ ಪ್ರದೇಶಗಳಿಗೆ, ಜಿಲ್ಲೆಗಳಿಗೆ, ರಾಜ್ಯಗಳಿಗೆ, ರಾಷ್ಟ್ರಗಳಿಗೆ ಹೋಗುವುದರಿಂದ ತಮ್ಮ ಮಕ್ಕಳ ಭವಿಷ್ಯದ ಜೊತೆಗೆ ವಿದ್ಯಾಭ್ಯಾಸದ ಮೇಲೆಯೂ ಸಹ ಪರಿಣಾಮ ಬೀರುತ್ತದೆ. ತಮ್ಮ ಸ್ವಂತ ಸ್ಥಳದಲ್ಲಿಯೇ ಕೂಲಿ, ವ್ಯಾಪಾರ, ಕೃಷಿ, ಮಾಡಿಕೊಂಡು ಜೀವನ ನಿರ್ವಹಣೆ ಮಾಡಬೇಕು. ಉನ್ನತ ಶಿಕ್ಷಣವನ್ನು ಪಡೆದುಕೊಂಡು ತಾವಿರುವ ಸ್ಥಳದಲ್ಲಿಯೇ ಉತ್ತಮವಾದ ಉದ್ಯೋಗ ಪಡೆಯುವುದರಿಂದ ವಲಸೆ ಬರದೇ ತಮ್ಮ ಊರಿನಲ್ಲಿಯೇ ನೆಲೆನಿಂತು ಇತರರು ಬೇರೆ ಪ್ರದೇಶಗಳಿಗೆ ವಲಸೆ ಹೋಗದಂತೆ ಮಾದರಿಯಾಗಬೇಕು. ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅವರು ಉದ್ಯೋಗ ತರಬೇತಿಯನ್ನು ಕೈಗೊಳ್ಳುವ ಮೂಲಕ ಸಣ್ಣ–ಸಣ್ಣ ವ್ಯಾಪಾರಗಳನ್ನು ಮಾಡುವುದರಿಂದ ಆರ್ಥಿಕ ಸುಸ್ಥಿರತೆಯನ್ನು ಕಾಪಾಡಿಕೊಳ್ಳಬೇಕು.

**ಉಪಸಂಹಾರ**

ವಲಸೆ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ ಕೈಗೊಳ್ಳಲಾಗಿದ್ದು, ವಲಸೆ ಎಂಬುದು ನಿರಂತರವಾಗಿ ಎಲ್ಲಾ ಪ್ರದೇಶದಲ್ಲೂ ಕಂಡು ಬರುವ ಒಂದು ಸಂಯೋಜನೆಯಾಗಿದೆ. ಈ ಅಧ್ಯಯನದಲ್ಲಿ ವಲಸೆ ಕಾರ್ಮಿಕರ ಜೀವನವನ್ನು ತಿಳಿಯಲು ಸಹಾಯಕವಾಗಿದೆ. ಸಮಾಜದಲ್ಲಿ ಅವರ ಸ್ಥಾನಮಾನವು ಅತ್ಯಂತ ಕೆಳಮಟ್ಟದಲ್ಲಿರುವುದೇ ಅಲ್ಲದೇ ಸಾಮಾಜಿಕವಾಗಿ, ಆರ್ಥಿಕವಾಗಿಯೂ ಸಹ ಹಿಂದುಳಿದಿದ್ದಾರೆ. ವಲಸೆ ಕಾರ್ಮಿಕರು ಒಂದಲ್ಲ ಒಂದು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ವಲಸೆ ಕಾರ್ಮಿಕರು ಹೆಚ್ಚಿನದಾಗಿ ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಇವರು ಕೆಲವು ತಿಂಗಳುಗಳಲ್ಲಿ ಹೆಚ್ಚಾಗಿ ವಲಸೆ ಬರುವವರಾಗಿದ್ದಾರೆ. ವಲಸೆ ಕಾರ್ಮಿಕರನ್ನು ಒಂದು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಿದಾಗ ಅವರ ಜೀವನದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಸಹಾಯಕವಾಗಿದೆ.

**ಪರಾಮರ್ಶನ ಗ್ರಂಥಗಳು**


- ಪುರುಷೋತ್ತಮ ಬಿಳಿಮಲೆ. (2019). *ವಲಸೆ ಸಂಘರ್ಷ ಮತ್ತು ಸಮನ್ವಯ.* ಆಕೃತಿ ಆಶಯ ಪಬಲಿಕೇಷನ್.
- Himath S R . (2017). *Migration of Labour in India*. Routledge.
- Tripaty and Dash C R. (1997). *Migrant labour in India.* Discovery Publishing house.
- Rajan S I and Smeetha M. (ed.) (2020). *Internal migration in India*. Sage Publication.
- Rajarama Reddy and B Anandareddy. (2021). A sociological study of migrant labourers in SPSR Nellore District of Karnataka. *Indian journal of Applied Research.* 11 (4). 4-5